ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು–570017
Telephone No: 0821-2544963

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID:gmproj@cescmysore.org

Company Identity Number[CIN]:- **U40109KA2004SGC035177**

ನಂ: ಪ್ರವ್ಯ(ವಾಣಿಜ್ಯ)/ಉಪ್ರವ್ಯ(ನಿ.ವ್ಯ-1)ಸಪ್ರವ್ಯ(ನಿವ್ಯ-ಲೆಕ್ಕ)2023-24/ಸಿವೈಎಸ್- 678 ದಿನಾಂಕ: 21 AUG 2023

## ಸುತ್ತೋಲೆ

ವಿಷಯ: ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ವಿದ್ಯುತ್ ದರ ಪರಿಷ್ಕರಣೆ ಆದೇಶದನ್ವಯ ಹಣಕಾಸು ವರ್ಷ-2024ಕ್ಕೆ ಸಂಬಂಧಿಸಿದ ವಿದ್ಯುಚ್ಛಕ್ತಿ ದರಪಟ್ಟಿ ಪುಸ್ತಕಗಳನ್ನು ಹಂಚಿಕೆ ಮಾಡುವ ಬಗ್ಗೆ.

ಉಲ್ಲೇಖ: ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ವಿದ್ಯುತ್ ದರ ಪರಿಷ್ಕರಣೆ ಆದೇಶ ದಿನಾಂಕ: 12.05.2023.

*******

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಆದೇಶ ದಿನಾಂಕ: 12.05.2023 ರಲ್ಲಿ ಚಾ.ವಿ.ಸ.ನಿ.ನಿ ವ್ಯಾಪ್ತಿಗೆ ಅನ್ವಯಿಸುವ ಪರಿಷ್ಕೃತ ವಿದ್ಯುಚ್ಛಕ್ತಿ ದರಗಳಿಗೆ ಅನುಮೋದನೆ ನೀಡಿರುತ್ತದೆ. ಸದರಿ ವಿದ್ಯುಚ್ಛಕ್ತಿ ದರಗಳು 01.04.2023 ರಿಂದ ಅಥವಾ ತದನಂತರ ಬರುವ ಮೊದಲ ಮೀಟರ್ ರೀಡಿಂಗ್ ದಿನಾಂಕದಿಂದ ಬಳಕೆಯಾಗುವ ವಿದ್ಯುತ್‌ಗೆ ಅನ್ವಯಿಸುತ್ತದೆ.

ಚಾ.ವಿ.ಸ.ನಿ.ನಿ.ಯಲ್ಲಿ ಈಗಾಗಲೇ ಕ.ವಿ.ನಿ.ಆ. ಆದೇಶದಲ್ಲಿನ ವಿದ್ಯುಚ್ಛಕ್ತಿ ದರಗಳಿಗೆ ಸಂಬಂಧಿಸಿದ ಸಾಮಾನ್ಯ ನಿಬಂಧನೆಗಳು ಹಾಗೂ ಷರತ್ತುಗಳನ್ನು ಪಾಲಿಸಿ, ವಿದ್ಯುಚ್ಛಕ್ತಿ ದರಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸೂಕ್ತ ನಿರ್ದೇಶನಗಳನ್ನು ನೀಡಲಾಗಿರುತ್ತದೆ ಹಾಗೂ ಬದಲಾಯಿತ ದರಗಳನ್ನು ವಿವಿಧ ತಂತ್ರಾಂಶಗಳಲ್ಲಿ ಸೂಕ್ತ ರೀತಿಯಲ್ಲಿ ಅಳವಡಿಸಲಾಗಿರುತ್ತದೆ ಹಾಗೂ ಈಗಾಗಲೇ ಜಕಾತಿ ಕೋಷ್ಠಕಗಳನ್ನು ಎಲ್ಲಾ ಸಕ್ಷಮ ಕಛೇರಿಗಳಿಗೆ ನೀಡಲಾಗಿರುತ್ತದೆ ಮತ್ತು ನಿಗಮದ ಅಂತರ ಜಾಲದಲ್ಲಿಯೂ ಸಹ ಪ್ರಕಟಿಸಲಾಗಿರುತ್ತದೆ.

ಮುಂದುವರೆದಂತೆ, ಗ್ರಾಹಕರಿಗೆ ಬಿಲ್ಲುಗಳನ್ನು ವಿತರಿಸಲು ಹಾಗೂ ಇನ್ನಿತರ ದೈನಂದಿನ ಕಾರ್ಯಗಳನ್ನು ನಿರ್ವಹಿಸಲು ಅನುವಾಗುವಂತೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶ ದಿನಾಂಕ: 12.05.2023 ರ ಸಾರಾಂಶಗಳನ್ನೊಳಗೊಂಡ ವಿವಿಧ ಜಕಾತಿ ಪ್ರವರ್ಗಗಳ ದರಸೂಚಿಗಳ ಕೋಷ್ಠಕ ಪ್ರತಿಗಳನ್ನು ಅಧಿಕಾರಿಗಳು, ಸಿಬ್ಬಂದಿಗಳು, ವಿವಿಧ ಚಾ.ವಿ.ಸ.ನಿ.ನಿ. ಕಛೇರಿಗಳು ಹಾಗೂ ಗ್ರಾಹಕರು/ಸಾರ್ವಜನಿಕರ ಉಪಯೋಗಕ್ಕೆ ವಿದ್ಯುಚ್ಛಕ್ತಿ ದರ ಪಟ್ಟಿ-2024 ಪುಸ್ತಕಗಳನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಮುದ್ರಿಸಲಾಗಿರುತ್ತದೆ.

ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಮುದ್ರಿತಗೊಂಡ ಈ ವಿದ್ಯುಚ್ಛಕ್ತಿ ದರಪಟ್ಟಿ-2024 ಪುಸ್ತಕಗಳನ್ನು ಈ ಸುತ್ತೋಲೆ ಜೊತೆಯಲ್ಲಿ ಲಗತ್ತಿಸಿರುವ ವಿವರಣಾ ಪಟ್ಟಿಯಲ್ಲಿರುವಂತೆ ಚಾ.ವಿ.ಸ.ನಿ.ನಿ.ಯ ಪ್ರತಿಯೊಂದು ವಲಯ, ವೃತ್ತ, ವಿಭಾಗ, ಉಪವಿಭಾಗ ಹಾಗೂ ಶಾಖೆಗಳಿಗೆ ಹಂಚಿಕೆಮಾಡಲಾಗಿರುತ್ತದೆ.

ಸದರಿ ವಿದ್ಯುಚ್ಛಕ್ತಿ ದರಪಟ್ಟಿ-2024 ಪುಸ್ತಕಗಳನ್ನು ಗ್ರಾಹಕರು / ಸಾರ್ವಜನಿಕರು ಖರೀದಿಸಲು ಇಚ್ಛಿಸಿದ್ದಲ್ಲಿ ಪ್ರತಿ ಪುಸ್ತಕಕ್ಕೆ ಜಿ.ಎಸ್.ಟಿ. ದರಗಳನ್ನೊಳಗೊಂಡಂತೆ, ಆಂಗ್ಲ ಪುಸ್ತಕಕ್ಕೆ ಜಿಎಸ್‌ಟಿ 18% ಸೇರಿ ರೂ. 55.00 (ಐವತ್ತೈದು ರೂಪಾಯಿ) ಮತ್ತು ಕನ್ನಡ ಪುಸ್ತಕಕ್ಕೆ ಜಿಎಸ್‌ಟಿ 18% ಸೇರಿ ರೂ. 51.00 (ಐವತ್ತೊಂದು ರೂಪಾಯಿ)ಗಳು ಪಾವತಿಸಿಕೊಂಡು, ತಮ್ಮ ಕಛೇರಿಗೆ ಒದಗಿಸಿರುವ ಪುಸ್ತಕದ ಮೇಲೆ ಮಾರಾಟಕ್ಕೆ ಎಂಬ ಸ್ಟಿಕರ್‌ನ್ನು ಸ್ಟಾಂಪ್ ಮಾಡಿ ಮಾರಾಟ ಮಾಡಬಹುದಾಗಿದೆ. ಗ್ರಾಹಕರಿಂದ ಹೆಚ್ಚಿನ ಬೇಡಿಕೆ ಇದ್ದಲ್ಲಿ, ಸಂಬಂಧಿಸಿದ ಕಛೇರಿಗಳು ನಿಗಮದ ವಾಣಿಜ್ಯ ಶಾಖೆಯನ್ನು ಸಂಪರ್ಕಿಸುವುದು ಹಾಗೂ ಸಂಬಂಧಿಸಿದ ಕಛೇರಿಗಳು ವಿದ್ಯುಚ್ಛಕ್ತಿ ದರಪಟ್ಟಿ-2024 ಪುಸ್ತಕಗಳನ್ನು ನಿಗಮ ಕಛೇರಿಯ ವಾಣಿಜ್ಯ ಶಾಖೆಯಿಂದ ಪಡೆಯುವುದು.

21/8

ಪ್ರಧಾನ ವ್ಯವಸ್ಥಾಪಕರು,(ವಾಣಿಜ್ಯ)
ಚಾವಿಸನಿನಿ, ನಿಗಮ ಕಛೇರಿ, ಮೈಸೂರು

ಪ್ರತಿಗಳು:

1. ಮುಖ್ಯ ಆರ್ಥಿಕ ಅಧಿಕಾರಿ, ಚಾವಿಸನಿನಿ, ನಿಗಮ ಕಛೇರಿ, ಮೈಸೂರು.
2. ಮುಖ್ಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಲಯ, ಚಾ.ವಿ.ಸ.ನಿ.ನಿ, ಮೈಸೂರು / ಹಾಸನ,
3. ಮುಖ್ಯ ಪ್ರಧಾನ ವ್ಯವಸ್ಥಾಪಕರು, ಅಂತರಿಕ ಪರಿಶೋದನೆ, ನಿಗಮ ಕಛೇರಿ, ಚಾ.ವಿ.ಸ.ನಿ.ನಿ., ಮೈಸೂರು.
4. ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರು/ ಚಾಮರಾಜನಗರ-ಕೊಡಗು/ ಮಂಡ್ಯ/ ಹಾಸನ.
5. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ನಿಗಮ ಕಛೇರಿ, ಚಾ.ವಿ.ಸ.ನಿ.ನಿ., ಮೈಸೂರು.
6. ಪೋಲೀಸ್ ಅಧೀಕ್ಷಕರು, ಜಾಗೃತದಳ, ಚಾ.ವಿ.ಸ.ನಿ.ನಿ., # 5363, 1ನೇ ಮಹಡಿ, ಪಿ.ಕೆ.ವಿ, ಆಚಾರ್ಯ ಸಬಾ ಭವನದ ಹಿಂಭಾಗ, ದಟ್ಟಗಳ್ಳಿ, 3ನೇ ಹಂತ, ಕನಕದಾಸನಗರ, ಮೈಸೂರು-570033,
7. ಎಲ್ಲಾ ಲೆಕ್ಕನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವಲಯ, ಚಾ.ವಿ.ಸ.ನಿ.ನಿ., ಮೈಸೂರು / ಹಾಸನ
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ.
9. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮಾಪಕ ವಿಭಾಗ, ಚಾ.ವಿ.ಸ.ನಿ.ನಿ., ಮೈಸೂರು / ಹಾಸನ
10. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಜಾಗೃತದಳ, ಚಾ.ವಿ.ಸ.ನಿ.ನಿ., # 5363/5, 1ನೇ ಮಹಡಿ, ಪಿ.ಕೆ.ವಿ. ಆಚಾರ್ಯ ಸಭಾ ಭವನದ ಹಿಂಭಾಗ, ದಟ್ಟಗಳ್ಳಿ 3ನೇ ಹಂತ, ಕನಕದಾಸನಗರ, ಮೈಸೂರು-570033 ರವರ ಮಾಹಿತಿ ಹಾಗೂ ಜಕಾತಿ ದರ ಪುಸ್ತಕಗಳನ್ನು ಚಾವಿಸನಿನಿ ವ್ಯಾಪ್ತಿಯ ಎಲ್ಲಾ ಠಾಣೆಗಳಿಗೆ ನೀಡುವುದು.
11. ಉಪ-ಪ್ರಧಾನ ವ್ಯವಸ್ಥಾಪಕರು, ಟಿ.ಎ.& ಕ್ಯೂ.ಸಿ. ನಿಗಮ ಕಛೇರಿ, ಚಾ.ವಿ.ಸ.ನಿ.ನಿ., ಮೈಸೂರು.
12. ಉಪ-ಪ್ರಧಾನ ವ್ಯವಸ್ಥಾಪಕರು, ಎಂ.ಐ.ಎಸ್ ಶಾಖೆ, ನಿಗಮ ಕಛೇರಿ, ಚಾ.ವಿ.ಸ.ನಿ.ನಿ., ಮೈಸೂರು ರವರಿಗೆ ನಿಗಮದ ಜಾಲತಾಣದಲ್ಲಿ ಪ್ರಕಟಿಸುವುದು.
13. ಎಲ್ಲಾ ಉಪ-ಲೆಕ್ಕನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರು/ ಚಾಮರಾಜನಗರ-ಕೊಡಗು/ ಮಂಡ್ಯ/ ಹಾಸನ,
14. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾ ಮತ್ತು ಪಾ ಉಪ ವಿಭಾಗ, ಚಾ.ವಿ.ಸ.ನಿ.ನಿರವರ ಮಾಹಿತಿಗಾಗಿ ಹಾಗೂ ವಿದ್ಯುಚ್ಛಕ್ತಿ ದರಪುಸ್ತಕಗಳನ್ನು ತಮ್ಮ ವಿಭಾಗದಿಂದ ಸ್ವೀಕರಿಸುವಂತೆ ತಿಳಿಯಪಡಿಸಿದೆ.
15. ಎಲ್ಲಾ ಲೆಕ್ಕಾಧಿಕಾರಿಗಳು, ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ.
16. ಎಲ್ಲಾ ಲೆಕ್ಕಾಧಿಕಾರಿಗಳು (ಆಂ.ಪ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ.
17. ಎಲ್ಲಾ ಶಾಖಾಧಿಕಾರಿಗಳು, ಕಾ ಮತ್ತು ಪಾ ಶಾಖೆ, ಚಾ.ವಿ.ಸ.ನಿ.ನಿ.
18. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಚಾವಿಸನಿನಿ, ಮೈಸೂರು ರವರ ಆಪ್ತ ಕಾರ್ಯದರ್ಶಿ,
19. ಮಾನ್ಯ ನಿರ್ದೇಶಕರು (ತಾಂತ್ರಿಕ), ಚಾವಿಸನಿನಿ, ಮೈಸೂರು ರವರ ಆಪ್ತ ಕಾರ್ಯದರ್ಶಿ,
20. ಮು.ಕ/ಕ.ಪ್ರ

82